ಕರ್ನಾಟಕ ಸರ್ಕಾರ ಸಿ ಆರ್ ಪಿ ಸಿ 67

ಹೇಳಿಕೆ ಹಾಳೆ

(ಆರ್.ಪಿ.ಸಂಖ್ಯೆ **57**)

ನಮೂನೆ ಸಂಖ್ಯೆ 4

## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಸಿಂಧನೂರು.

## ಸಿ.ಸಿ.ನಂ.05/2024

| | | | |
|---|---|---|---|
| **ಸಾಕ್ಷಿದಾರರ ಹೆಸರು** | **ಮಹಾಲಿಂಗಪ್ಪ** | | |
| **ತಂದೆಃಹೆಸರು** | **ಯಮನಪ್ಪ** | **ಪಿಡಬ್ಲ್ಯೂಃ** | **6** |
| **ವಯಸ್ಸು** | **46 ವರ್ಷ** | **ಸಿಡಬ್ಲ್ಯೂಃ** | **5** |
| **ಉದ್ಯೋಗಃ** | **ವ್ಯವಸಾಯ** | | |
| **ವಾಸ ಸ್ಥಳಃ** | **ಗೌಡನಬಾವಿ ಕ್ಯಾಂಪ್.** | | |

ದಿನಾಂಕ **02-07-2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃಃ**

ಚಾಸಾ-1, 5 & ಆರೋಪಿಯ ಪರಿಚಯ ಇಲ್ಲ. ಜಗಳವಾದಾಗ ನಾನು ಬಿಡಿಸಿದ್ದೆ. ರಿಂಚ್ ಫಾನರ್ ತೆಗೆದುಕೊಂಡು ಚಾಸಾ-1 ರವರಿಗೆ ಒಬ್ಬ ಸಾಬ್ ಹೊಡೆದಿದ್ದರು. ಫ್ಯಾನ್ ರಿಪೇರಿ ಮಾಡಿದ ರೊಕ್ಕ ಕೇಳಿದ್ದಕ್ಕೆ ತಲೆಗೆ ಅಂಗಡಿಯಲ್ಲಿ ಹೊಡೆದಿದ್ದರು. ನಂತರ ನಾನು ಅವರನ್ನು ಕರೆದುಕೊಂಡು ಪೋ.ಠಾ.ಗೆ ಹೋದೆ, ಅಲ್ಲಿಂದ ಸರ್ಕಾರಿ ಆಸ್ಪತ್ರೆಗೆ ಹೋದೆವು, ಆತನಿಗೆ ಹೊಲಿಗೆ ಹಾಕಿದ್ದರು, ಒಂದು ದಿನ ಆತ ಆಸ್ಪತ್ರೆಯಲ್ಲಿದ್ದ. ದಿ.16-06-2021 ರಂದು ಬೆ. 9 ಕ್ಕೆ ಈ ಘಟನೆ ನಡೆದಿತ್ತು.

ಪೋಲೀಸರು ಈ ಬಗ್ಗೆ ಕೇಳಿದ್ದರು, ನಾನು ಹೇಳಿದ್ದೆ.

ಸಾಕ್ಷಿಯು ನ್ಯಾಯಾಲಯದ ಮುಂದಿರುವ ಮು.ಮಾ. 1 ನ್ನು ನೋಡಿ ಗುರುತಿಸಿರುತ್ತಾರೆ. ನಿಪಿ-3 & 4 ನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು, ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿಯನ್ನು ಕೋರಿದ್ದು, ಅನುಮತಿಯನ್ನು ನೀಡಲಾಯಿತು.)**

**ಪಾಟೀ ಸವಾಲು:: ಮಾನ್ಯ ಸ.ಸ.ಅ. ರವರಿಂದ::**

ಆರೋಪಿಯ ಹೆಸರು ವಲೀಪಟೇಲ್ ಎಂದು ನಿಮ್ಮ ಹೇಳಿಕೆಯಲ್ಲಿ ಹೇಳಿ ಬರೆಸಿದ್ದಿರಿ ಎಂದರೆ ಸರಿ. ಆರೋಪಿ ನನ್ನನ್ನು ಇನ್ನೊಮ್ಮೆ ಹಣ ಕೇಳಿದರೆ ನಿನ್ನನ್ನು ಜೀವ ಸಹಿತ ಬಿಡುವುದಿಲ್ಲ ಎಂದು ಚಾಸಾ-1 ರವರಿಗೆ ಜೀವದ ಬೆದರಿಕೆ ಹಾಕಿದ್ದ ಎಂದು ನಿಮ್ಮ ಹೇಳಿಕೆಯಲ್ಲಿ ಹೇಳಿ ಬರೆಸಿದ್ದಿರಿ ಎಂದರೆ ಸರಿ. ನೀವು & ಚಾಸಾ-4 ರವರು ಜಗಳ ಬಿಡಿಸಿದ್ದಿರಿ ಎಂದರೆ ಸರಿ. ಸದರಿ ವಿಷಯವಾಗಿ ನೀವು ಪೋಲೀಸರಿಗೆ ಹೇಳಿಕೆ ಕೊಟ್ಟಿದ್ದಿರಿ ಎಂದರೆ ಸರಿ.

**ಪಾಟೀಸವಾಲು: ಆರೋಪಿ ಪರ ವಕೀಲರಿಂದ:**

1. ಚಾಸಾ-1 ರವರು ನನಗೆ 20 ವರ್ಷಗಳಿಂದ ಪರಿಚಯ ಇದ್ದಾರೆ. ಪೋಲೀಸರಿಗೆ ಹೇಳಿಕೆಯನ್ನು ಸ್ಥಳದಲ್ಲಿ ಕೊಟ್ಟಿದ್ದೆ. ನಾನು ಫ್ಯಾನ್ ರಿಪೇರಿ ಮಾಡುವುದಿಲ್ಲ. ನೀವು ಫ್ಯಾನ್ ರಿಪೇರಿ ಮಾಡುತ್ತೀರಿ ಎಂದು ಪೋಲೀಸರಿಗೆ ಹೇಳಿಕೆ ಕೊಟ್ಟಿದ್ದೀರಿ ಎಂದರೆ ಸರಿಯಲ್ಲ.

2. ಘಟನೆ ನಡೆದ ದಿನ ನಾನು ಫ್ಯಾನ್ ರಿಪೇರಿ ಮಾಡಿಸಲು ಹೋಗಿದ್ದೆನು.

3. ನಾನು ಘಟನಾ ಅಂಗಡಿಯನ್ನು ನೋಡಿದ್ದೇನೆ, ಆದರೆ ಅದರ ಚೆಕ್ ಬಂದಿ ಹೇಳಲು ಬರುವುದಿಲ್ಲ. ಘಟನೆ ಬೆ.9 ಗಂಟೆಗೆ ಆಗಿತ್ತು. ನಾನು 8-30 ರ ಸುಮಾರಿಗೆ ಹೋಗಿದ್ದೆ. ಚಾಸಾ-1 ರವರ ಅಂಗಡಿ ಸಣ್ಣದಿದ್ದು, ಅದರಲ್ಲಿ ಒಬ್ಬನೇ ಕೂರುತ್ತಾನೆ ಎಂದರೆ ಸಾಕ್ಷಿಯು ಅಂಗಡಿ ಸಣ್ಣದಿದೆ, ಆದರೆ ಇನ್ನೊಬ್ಬರು ಒಳಗೆ ಹೋಗಬಹುದು ಎನ್ನುತ್ತಾರೆ. ನಾನು ಅಂಗಡಿಯ ಹೊರಗಡೆ ಕೂತಿದ್ದೆ.

4. ಚಾಸಾ-1 ರವರು ಆ ದಿನ ಯಾವ ಬಟ್ಟೆ ಧರಿಸಿದ್ದರು ಎಂದರೆ ಸಾಕ್ಷಿಯು ಬಿಳಿ ಬಟ್ಟೆ ಹಾಕಿದ್ದ ಎನ್ನುತ್ತಾರೆ.

5. ಗಲಾಟೆಯು 10-15 ನಿಮಿಷ ಆಗಿತ್ತು.

6. ಠಾಣೆಗೆ ನಾವು ಒಟ್ಟು ಮೂರು ಜನ ಹೋಗಿದ್ದೆವು. ನಾವು ನಡೆದುಕೊಂಡು ಠಾಣೆಗೆ ಹೋಗಿದ್ದೆವು. ಠಾಣೆಯಲ್ಲಿ 20 ನಿಮಿಷ ಇದ್ದೆವು. ಆಸ್ಪತ್ರೆಯಲ್ಲಿ ಚೀಟಿ ನಾನೇ ಮಾಡಿಸಿದ್ದೆ. ಆ ಕಾಲಕ್ಕೆ ವೈದ್ಯರು ಇರಲಿಲ್ಲ, ನರ್ಸ್ ಇದ್ದರು.

7. ಪೋಲೀಸರು ಆಸ್ಪತ್ರೆಗೆ ತಡವಾಗಿ ಬಂದಿದ್ದರು.

8. ನಾನು ಒಕ್ಕಲುತನ ಮಾಡುತ್ತೇನೆ ಎಂದು ಹೇಳಿದ್ದೆ, ಆದರೆ ಪೋಲೀಸರು ಎಲೆಕ್ಟ್ರೀಷಿಯನ್ ಎಂದು ಬರೆದುಕೊಂಡಿದ್ದಾರೆ ನಾನೇನು ಮಾಡಲಿ.

9. ನೀವು ಯಾವುದೇ ಘಟನೆ ನೋಡಿಲ್ಲ, ಜಗಳ ಬಿಡಿಸಿಲ್ಲ, ರಿಂಚ್ ಫಾನರ್ನಿಂದ ಆರೋಪಿ ಚಾಸಾ-1 ರವರಿಗೆ ಹೊಡೆದಿಲ್ಲ, ಚಾಸಾ-1 ರವರನ್ನು ಠಾಣೆಗೆ & ಆಸ್ಪತ್ರೆಗೆ ಕರೆದುಕೊಂಡು

ಹೋಗಿಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರು ನಿಮ್ಮ ಪರಿಚಯದವರಾದ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ., ಸಿಂಧನೂರು.**